**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ, ಬನಹಟ್ಟಿ**

**ಸಿಸಿ. 376/2023**
**ಸಿ.ಡಬ್ಲ್ಯೂ: 8 ಪಿ.ಡಬ್ಲ್ಯೂ: 7**

| | | |
|---|---|---|
| ಸಾಕ್ಷಿದಾರರ ಹೆಸರು | ಶಂಕರಪ್ಪ ಗೋಕಾವಿ | |
| ತಂದೆ/ಗಂಡನ ಹೆಸರು | ಭೀಮಪ್ಪ | |
| ವಯಸ್ಸು | 63 | ವರ್ಷ |
| ಉದ್ಯೋಗ | ನಿವೃತ್ತ ನೌಕರರು | |
| ವಾಸಸ್ಥಳ | ಗಲಗಲಿ | |

**ಸಾಕ್ಷಿಯನ್ನು ಇಂದು ದಿನಾಂಕಃ 24-04-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ಚಾಸಾ-5 ಮತ್ತು 6 ನನಗೆ ಪರಿಚಯ .

2. ಸಾಕ್ಷಿಯು ಮುಚ್ಚಳಿಕೆ ಪತ್ರದ ಮೇಲಿರುವ ತನ್ನ ಛಾಯಾಚಿತ್ರವನ್ನು ಹಾಗೂ ಸಹಿಯನ್ನು ನೋಡಿ ಗುರುತಿಸಿದ್ದು , ಸದರಿ ಮುಚ್ಚಳಿಕೆ ಪತ್ರವನ್ನು ನಿಪಿ-7 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು.

3. ಸಾಕ್ಷಿಯು ತನ್ನ ವಾಹನದ ಆರ್ .ಸಿ ಕಾರ್ಡ ಹಾಗೂ ಫಾರಂ ನಂ.38 ಗಳನ್ನು ನೋಡಿ ಗುರುತಿಸಿದ್ದು , ಸದರಿಯವುಗಳನ್ನು ಅನುಕ್ರಮವಾಗಿ ನಿಪಿ-8 ಹಾಗೂ 9 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

**ಸಿವಿಲ್ ನ್ಯಾಯಾಧೀಶರು, ವ ಜೆ.ಎಮ್.ಎಫ್.ಸಿ.**
**ಬನಹಟ್ಟಿ.**

**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ, ಬನಹಟ್ಟಿ**

**ಸಿಸಿ. 376/2023**
**ಸಿ.ಡಬ್ಲ್ಯೂ:6 ಪಿ.ಡಬ್ಲ್ಯೂ: 6**

| | | |
|---|---|---|
| ಸಾಕ್ಷಿದಾರರ ಹೆಸರು | ಮಂಜುನಾಥ ಕೊಡಗನೂರು | |
| ತಂದೆ/ಗಂಡನ ಹೆಸರು | ಈರಪ್ಪ | |
| ವಯಸ್ಸು | 38 | ವರ್ಷ |
| ಉದ್ಯೋಗ | ಒಕ್ಕಲುತನ | |
| ವಾಸಸ್ಥಳ | ಯರಗಟ್ಟಿ | |

ಸಾಕ್ಷಿಯನ್ನು ಇಂದು ದಿನಾಂಕಃ **24-04-2026** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ

ಚಾಸಾ-1 , 7 ರಿಂದ 9 ನನಗೆ ಪರಿಚಯ . ದಿಃ 23-01-2023 ರಂದು ನಾನು ಹಾಗೂ ಚಾಸಾ-7 ರವರು ಚಾಸಾ- 9 ರವರ ಮನೆಗೆ ಹೋಗುತ್ತಿದ್ದೆವು. ನಂತರ ಚಾಸಾ-4 ರವರು ಪೋನ್ ಮುಖಾಂತರ ಚಾಸಾ-1 ರವರಿಗೆ ಚಾಸಾ-9 ರವರಿಗೆ ಹನಗಂಡಿ ರಸ್ತೆಯ ಹತ್ತಿರ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ನಾನು ಹಾಗೂ ಚಾಸಾ-7 ರವರು ಅಪಘಾತ ಸ್ಥಳಕ್ಕೆ ಹೋದೆವು. ಸ್ಥಳಕ್ಕೆ ಹೋಗಿ ನೋಡಲಾಗಿ ಚಾಸಾ-9 ರವರು ಕೆಳಗೆ ಬಿದಿದ್ದರು ಹಾಗೂ ಅವರ ತಲೆಯ ಹಿಂಭಾಗಕ್ಕೆ ಪೆಟ್ಟಾಗಿತ್ತು ಹಾಗೂ ಎಡ ಮೊಣಕಾಲು ಮುರಿದಿತ್ತು. ಚಾಸಾ-9 ರವರಿಗೆ ಪ್ರಜ್ಞೆ ಇರಲಿಲ್ಲ. ನಂತರ ನಾವು ಚಾಸಾ-9 ರವರನ್ನು ಖಾಸಗಿ ವಾಹನದಲ್ಲಿ ಚಾಸಾ-11 ರವರ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಂತರ ಚಾಸಾ-9 ರವರವನು ಹೆಚ್ಚಿನ ಚಿಕಿತ್ಸೆಗಾಗಿ ಮಿರಜನ್ ಭಾರತಿ ಆಸ್ಪತ್ಗೆರೆಗ ಕರೆದ್ಯೊಯಲಾಯಿತು. ನಂತರ ಚಾಸಾ-9 ರವರನ್ನು ಬೇರೆ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಚಾಸಾ-4 ರವರು ಅಪಘಾತಪಡಿಸಿದ ಬಸ್ ಸಂಖ್ಯೆಃ KA-29-H- ಕೊನೆಯ ಎರಡು ಸಂಖ್ಯೆಗಳು 52 ಅಂತ ಇತ್ತು , ಸಂಪೂರ್ಣ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಬಸ್ ಆರೋಪಿಯು ತೇರದಾಳದಿಂದ ರಬಕವಿ ಕಡೆಗೆ ಚಲಾಯಿಸುತ್ತಿದ್ದನು ಎಂದು ಗೊತ್ತಾಯಿತು.

2. ಆಗ ಸಂಜು ಕುಳೂರು ರವರು ನಡೆದುಕೊಂಡು ಹೋಗುವಾಗ ಸದರಿ ಬಸ್ ಆತನಿಗೆ ಹಿಂದೆ ಇಂದ ಹಾಯಿಸಿ ಅಪಘಾತಪಡಿಸಿರುತ್ತಾನೆ ಎಂದು ಗೊತ್ತಾಗಿರುತ್ತದೆ. ಈ ಕುರಿತು ಚಾಸಾ-1 ರವರು ದೂರನ್ನು ದಾಖಲಿಸಿರುತ್ತಾರೆ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

__ಪಾಟೀ ಸವಾಲು : ಆರೋಪಿಪರ ವಕೀಲರಿಂದ:__

3. ನಾನು ಹಾಗೂ ಚಾಸಾ-7 ರವರು ಚಾಸಾ-9 ರವರ ಮನೆಗೆ ಬೆಳಿಗ್ಗೆ 6 ಗಂಟೆಗೆ ಹೋಗಿದ್ದೆವು. ಡಿಪ್ಲೋಮಾ ಸಲುವಾಗಿ ಮಾಹಿತಿ ಕೇಳಲು ಸದರಿಯವರ ಮನೆಗೆ ಹೋಗಿದ್ದೆವು. ನಮ್ಮ ಊರಿನಿಂದ ನಾವು ಮೋಟಾರ ಸೈಕಲ್ ಮೇಲೆ ಹೋಗಿದ್ದೆವು. ಸಾಮಾನ್ಯವಾಗಿ ಬೇರೆ ಊರಿಗೆ ಹೋಗಬೇಕಾದರೇ ಬೆಳಿಗ್ಗೆ 6 ಗಂಟೆಯ ಜಾವ ಹೋಗುತ್ತೀರಾ ಎಂದರೆ ಸಾಕ್ಷಿಯು ಕೆಲಸ ಇದ್ದರೇ ಹೋಗುತ್ತೇವೆ ಎಂದು ನುಡಿಯುತ್ತಾರೆ. ಚಾಸಾ-1 ರವರು ನನಗೆ ದೂರಿನಿಂದ ಅಕ್ಕ ಆಗಬೇಕು. ಚಾಸಾ-1 ರವರು ಚಾಸಾ-4 ರವರಿಂದ ಕರೆ ಬಂದಿರುತ್ತದೆ ಎಂದು ನನಗೆ ಹೇಳಿರುತ್ತಾರೆ. ನಾನು ಸ್ಥಳಕ್ಕೆ ಹೋದ ನಂತರ ಪೊಲೀಸರಿಗೆ ಅಪಘಾತದ ವಿಷಯವನ್ನು ತಿಳಿಸಿರುವುದಿಲ್ಲ , ಕಾರಣ ನಾವು ಆಸ್ಪತ್ರೆಗೆ ಹೋಗಿರುತ್ತೇವೆ. ಸದರಿ ಖಾಸಗಿ ವಾಹನ ಕಾರ್ ಇದ್ದು , ಯಾರಿಗೆ ಸಂಬಂಧಪಟ್ಟಿತ್ತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ಯಾಕೆ ವಿಷ್ಮಯವನ್ನು ತಿಳಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಚಾಸಾ-9 ರವರಿಗೆ ಗಾಯವಾಗಿದ್ದರಿಂದ ನಾವು ಕೂಡಲೇ ಚಿಕಿತ್ಸೆ ಕೊಡಲು ಕರೆದುಕೊಂಡು ಹೋದ ಕಾರಣ ಪೊಲೀಸರಿಗೆ ತಿಳಿಸಿರುವುದಿಲ್ಲ. ನಂತರ ಆಂಬ್ಯುಲೆನ್ಸನ್ನು ತೆಗೆದುಕೊಂಡು ಚಾಸಾ-9 ರವರನ್ನು ಮಿರಜ್ ಗೆ ಕರೆದ್ಯೊಯಲಾಯಿತು. ಚಾಸಾ-9 ರವರನ್ನು ಕರೆದುಕೊಂಡು ಹೋದ ಖಾಸಗಿ ವಾಹನವನ್ನು ಜನರು ನಿಲ್ಲಿಸಿದರು , ಆದ ಕಾರಣ ಸದರಿ ಕಾರ್ ಯಾರಿಗೆ ಸಂಬಂಧಪಟ್ಟಿದು ಎಂದು ನನಗೆ ಗೊತ್ತಿಲ್ಲ. ಚಾಸಾ- 9 ರವರಿಗೆ ಸುಮಾರು 40 ರಿಂದ 45 ವರ್ಷ ವಯಸ್ಸು ಆಗಿತ್ತು. ಅಪಘಾತ ಸ್ಥಳದ ಚಕ್ಕಬಂದಿ ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. ಸದರಿ ಅಪಘಾತವು ಹನಗಂಡಿಯಿಂದ ರಬಕವಿ ಕಡೆಗೆ ಬರುವ ರಸ್ತೆಯ ಎಡಗಡೆಯಲ್ಲಿ ಆಗಿತ್ತು. ಸದರಿ ಅಪಘಾತ ಸ್ಥಳದ ದಕ್ಷಿಣಕ್ಕೆ ಡಾಂಬರ ರಸ್ತೆ , ಪೂರ್ವಕ್ಕೆ - ಹೊಲ , ಪಶ್ಚಿಮಕ್ಕೆ - ಗಿಡ ಮತ್ತು ಉತ್ತರಕ್ಕೆ - ಹೊಲ ಇತ್ತು.

4. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯು ಚಿರಾಡುತ್ತಾ ಬಿದಿದ್ದರೇ ಅವನಿಗೆ ನಾನು ಖಾಸಗಿ ವಾಹನದಲ್ಲಿ ಕರೆದುಕೊಂಡು ಹೋಗುತ್ತೇವೆ ಎಂದರೆ ಹೌದು. ಚಾಸಾ-9 ರವರನ್ನು ಮಿರಜ್ಗೆ ಕರೆದುಕೊಂಡ ಹೋದ ನಂತರ ಪೊಲೀಸರಿಗೆ ನಾನು ತಿಳಿಸಿರುವುದಿಲ್ಲ. ಚಾಸಾ-9 ರವರದೇ ತಪ್ಪು ಇದ್ದ ಕಾರಣ ನಾವು ಸದರಿ ವಿಷಯವನ್ನು ಪೊಲೀಸರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಾಸಾ-9 ರವರು ತನಗೆ ಬಿಡುವಂತೆ ಚಿರಾಡುತ್ತಿದ್ದನು. ಅಪಘಾತವಾದ ಎಷುಟ

ದಿನಗಳ ನಂತರ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ನೆನಪಿಲ್ಲ. ಚಾಸಾ-9 ರವರು ನನ್ನ ಸಂಬಂಧಿಕರು ಇದ್ದ ಕಾರಣ ಸುಳ್ಳು ಕಥೆಯನ್ನು ಕಟ್ಟಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಚಾಸಾ-9 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ ಹಾಗೂ ಪೊಲೀಸರು ನನ್ನದು ಯಾವುದೇ ಹೇಳಿಕೆಯನ್ನುಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿ ಅಪಘಾತದ ಕುರಿತು ಯಾವುದೇ ಮಾಹಿತಿ ಇಲ್ಲ ಎಂದರೆ ಹೌದು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

**ಸಿವಿಲ್ ನ್ಯಾಯಾಧೀಶರು, ವ ಜೆ.ಎಮ್.ಎಫ್.ಸಿ.**
**ಬನಹಟ್ಟಿ.**

**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ, ಬನಹಟ್ಟಿ**

**ಸಿಸಿ. 376/2023**
**ಸಿ.ಡಬ್ಲ್ಯೂ:5 ಪಿ.ಡಬ್ಲ್ಯೂ: 5**

| | | |
|---|---|---|
| ಸಾಕ್ಷಿದಾರರ ಹೆಸರು | ಗುಲಾಬ ರಾಠೋಡ | |
| ತಂದೆ/ಗಂಡನ ಹೆಸರು | ಪುಲಸಿಂಗ್ | |
| ವಯಸ್ಸು | 42 | ವರ್ಷ |
| ಉದ್ಯೋಗ | ನಿರ್ವಹಕ | |
| ವಾಸಸ್ಥಳ | ಆಹೇರಿ , ವಿಜಯಪುರ ಜಿಲ್ಲೆ. | |

**ಸಾಕ್ಷಿಯನ್ನು ಇಂದು ದಿನಾಂಕ: 24-04-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ**

ಆರೋಪಿ ನನಗೆ ಪರಿಚಯ ಪರಿಚಯ. ಸುಮಾರು 1 ವರ್ಷದ ಹಿಂದೆ ತೇರದಾಳದಿಂದ ಜಮಖಂಡಿಗೆ ಬಸ್ ಸಂಖ್ಯೆ: KA-29-F-1352 ನೇದ್ದರಲ್ಲಿ ನಾನು ಹಾಗೂ ಆರೋಪಿ ಬೆಳಿಗ್ಗೆ 5.45 ಗಂಟೆಗೆ ಹೋಗುತ್ತಿದ್ದೆವು. ಸದರಿ ಬಸ್ ಆರೋಪಿಯು ಚಲಾಯಿಸುತ್ತಿದ್ದನು. ನಂತರ ನನಗೆ ಶಬ್ದ ಕೇಳಿದ್ದು , ನಮ್ಮ ಬಸ್ ಮುಂದೆ ದಾಟಿತ್ತು. ನಂತರ ಮೋಟಾರ ಸೈಕಲ ರವರು ನಮಗೆ ಬಂದು ನಿಮ್ಮ ಬಸ್ ಹಾಯಿದ ಕಾರಣ ಮೋಟಾರ ಸೈಕಲ ರವರು ಬಿದ್ದಿರುತ್ತಾರೆ ಎಂದು ತಿಳಿಸಿದರು. ನಮ್ಮ ಬಸ್ ನಿಧಾನವಾಗಿ ಚಲಿಸುತ್ತಿತು. ನಾವು ಸದರಿ ಮೋಟಾರ ಸೈಕಲ್ ಸವಾರರನ್ನು ನೋಡಲಾಗಿ ಸದರಿಯವರಿಗೆ ಪ್ರಜ್ಞೆ ಇರಲಿಲ್ಲ. ನಂತರ ಸದರಿ ಮೋಟಾರ ಸೈಕಲ ಸವಾರನ್ನು ಆಂಬ್ಯುಲೆನ್ಸ ಮುಖಾಂತರ ಕರೆದೊಯ್ಯಲಾಯಿತು. ಸದರಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಂತರ ಈ ಕುರಿತು ಪಿರ್ಯಾದಿಯನ್ನು ನೀಡಲಾಗಿತ್ತು. ಈ ಕುರಿತು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಎ.ಪಿ.ಪಿ ವಕೀಲರಿಂದ**

ದಿನಾಂಕ:23-01-2023 ರಂದು ಬೆಳಿಗ್ಗೆ 6.40 ಗಂಟೆ ಹನಗಂಡಿ ಹತ್ತಿರ ನಮ್ಮ ಬಸ್ಸಿನ ಎದುರಿಗೆ ಒಂದು ವಾಹನ ಬಂದ ಕಾರಣ ನಮ್ಮ ಬಸ್ ಚಾಲಕನು ಸದರಿ ಬಸ್ನು ಸೈಡಿಗೆ

ತೆಗೆದುಕೊಳ್ಳುವಾಗ ಸದರಿ ಬಸ್ ಅಲ್ಲಿ ನಡೆದುಕೊಂಡು ಹೋಗುತ್ತಿರುವ ಸಂಜು ಕುಳೂರು ರವರಿಗೆ ಹಾಯಿಸಿ ಅಪಘಾತಪಡಿಸಿತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಸಂಜು ರವರು ತಲೆಯ ಹಿಂದಿನ ಬಾಜು, ಹಣೆಗೆ ಗಾಯಪೆಟ್ಟು ಆಗಿದ್ದು , ಮೂಗಿನಿಂದ ರಕ್ತ ಬರುತ್ತಿತ್ತು ಎಂದರೆ ಸಾಕ್ಷಿಯು ಮೂಗಿನಿಂದ ರಕ್ತ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಅಪಘಾತವು ಆರೋಪಿಯು ಜೋರಾಗಿ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿದ್ದರಿಂದ ಆಗಿತ್ತು, ನಾನು ಕಣ್ಣಾರೇ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ಆರೋಪಿಯ ಸುಮಾರು 15 ವರ್ಷಗಳಿಂದ ಕೂಡಿ ಕೆಲಸ ಮಾಡುತ್ತಿದ್ದೇವೆ. ನಾನು ಹಾಗೂ ಆರೋಪಿಯು 15 ವರ್ಷಗಳಿಂದ ಕೂಡಿ ಕೆಲಸ ಮಾಡಿದ ಕಾರಣ ಆರೋಪಿಯು ಸದರಿ ಅಪಘಾತಪಡಿಸಿದ್ದರು ಸಹ ನಾನು ಆರೋಪಿಯನ್ನು ಶಿಕ್ಷೆಯಿಂದ ಪಾರು ಮಾಡಲು ಸದರಿ ಅಪಘಾತವನ್ನು ಕಣ್ಣಾರೇ ನೋಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿಪರ ವಕೀಲರಿಂದಃ</u>**

ನಿಲ್ದಾಣಗಳು ಸಮೀಪ ಇರುವ ಕಾರಣ ಹಾಗೂ ನಿರ್ವಹಕ ಎಲ್ಲಾ ಪ್ರಯಾಣಿಕರ ಟಿಕೆಟಗಳನ್ನು ತೆಗೆದುಕೊಳ್ಳಲು ಅನುಕೂಲ ಮಾಡಲು ಚಾಲಕ ಬಸ್ಸನ್ನು ನಿಧಾನವಾಗಿ ಚಲಾಯಿಸುತ್ತಾನೆ ಎಂದರೆ ಹೌದು. ಅಪಘಾತ ಸ್ಥಳದ ಹಿಂದೆ ಹಾಗೂ ಮುಂದುಗಡೆ ಸಾಧಾರಣ ತಿರುವು ಇದೆ ಎಂದರೆ ಹೌದು. ದೇಸಾಯಿ ಜಮೀನು ಹತ್ತಿರ ತಿರುವು ಇರುವುದರಿಂದ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಹೌದು. ಸದರಿ ಅಪಘಾತ ಸ್ಥಳದ ಎರಡು ದಿಕ್ಕಿನಲ್ಲಿ ರಸ್ತೆ ಇಳಿಜಾರು ಇರುತ್ತದೆ ಎಂದರೆ ಹೌದು. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಹೌದು. ಹನಗಂಡಿ ಹತ್ತಿರ ನಮ್ಮ ಬಸ್ಸಿನ ಮುಂದೆ ವಾಹನ ಬಂದಿದ್ದರಿಂದ ನಮ್ಮ ಬಸ್ಸನ್ನು ಚಾಲಕನು ಸೈಡಿಗೆ ತೆಗೆದುಕೊಳ್ಳುವಾಗ ಅಪಘಾತಪಡಿಸಿರುತ್ತಾನೆ ಎಂದು ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದು ಹೌದು. ಆರೋಪಿಯು ಜೋರಾಗಿ ನಿರ್ಲಕ್ಷ್ಯತನದಿಂದ ಅಪಘಾತಪಡಿಸಿರುತ್ತಾನೆ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಹೌದು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

Sd/-

**ಸಿವಿಲ್ ನ್ಯಾಯಾಧೀಶರು, ವ ಜೆ.ಎಮ್.ಎಫ್.ಸಿ.**
**ಬನಹಟ್ಟಿ.**